RELEASE OF FOREST LANDS TO HARIJAN FAMILIES OF KONDAHALLI VILLAGE

417 SRI M. H. JAYAPRAKASH NARAAYNA (Sirsi).—

Will the Minister for Food and Forests be pleased to state .—

(*a*) whether it is a fact that the Minister for Forest had given an assurance in the Legislative Assembly on 2-8-1972 that about 50 acres in Survey Nos. 21 and 51 of Balahakatte Minor Forests of Kondahalli Dahkla village in, Magadi taluk of Bangalore district would be released for 20 Harijan families of Kondahalli village.

(*b*) the reasons for not implementing the assurance so, far.

(*c*) whether it is possible to release this forest land for cultivation to those who are cultivating this land unauthorisedly since 1953 as a special cese as this unfit for forest ?

SRI K. H. PATIL ,—(Minister for Food and Forest)

(*a*) No assurance was given that the forest areas would be released. On the contrary the Members or the House were requested to co-operate with the Government in curbing the illegal activities of person who take advantage of the members of Scheduled Castes and Scheduled Tribes, for gaining their own personal ends. It was expressed that while Government would consider reasonable requests from the members of Scheduled Castes and Scheduled Tribes it would not be proper to encourage unlawful activities.

(*b*) Dos not arise.

(*c*) As the enroachment was in patches. honeycombing the forest area. its release is not possible. Several of the encroachers have already left and the sites have been afforested.

ಶ್ರೀ ಎಂ ಎಚ್. ಜಯಪ್ರಕಾಶ ನಾರಾಯಣ್ ;—ಮಾಗಡಿ ತಾಲ್ಲೂಕಿನಲ್ಲಿ ೨೦ ಭೂಹೀನ ಹರಿಜನರು ೨೦ ವರ್ಷದಿಂವ ಫೈನರ್ ಫಾರೆಸ್ಟ್ ಪ್ರದೇಶದಲ್ಲಿ ಅಕ್ರಮವಾಗಿ ಉಳಿಮೆ ಮಾಡುತ್ತಿರುವುದು ನಿಜವೇ ?

† ಶ್ರೀ ಕೆ. ಎಚ್ ಪಾಟೀಲ್ :—ಒಟ್ಟು ೨೫ ಜನರು ಆ ರೀತಿ ಮಾಡುತ್ತಿದ್ದಾರೆ, ಅವರಲ್ಲಿ ೬ ಜನರಿಗೆ ಭೂಮಿ ಇಲ್ಲ. ಉಳಿದವರಿಗೆ ಬೂಮಿ ಇದೆ.

ಶ್ರೀ ಎಂ ಎಚ್ ಜಯಪ್ರಕಾಶ ನಾರಾಯಣ್ :—೨೦ ವರ್ಷದಿಂದ ಉಳುಮೆ ಮಾಡುತ್ತಿದ ಭೂಹೀನರಿಗೆ ಅವರಿಗೆ ಜೀವನಕ್ಕೆ ಬೇರೆ ದಾರಿ ಇಲ್ಲದಿರುವುದರಿಂದ ಸರಕಾರಕ್ಕೆ ಮನವಿ ಕೊಡಿ ಜಮೀನು ಕೊಡುತ್ತೇವೆ ಎಂದು ಭರವಸೆ ಕೊಟ್ಟಿರುವುದು ನಿಜವೇ ?

ಶ್ರೀ ಕೆ. ಎಚ್ ಪಾಟೀಲ್ :—ಭೂಹೀನರು ಅಕ್ರಮವಾಗಿ ಸಾಗು ಮಾಡಿರುವುದನ್ನು ಸ್ವಯಂ ಸರಕಾರಕ್ಕೊಪ್ಪಿಸಿ ಬೇರೆ ಜಮೀನಿಗೆ ಅರ್ಜಿ ಕೊಟ್ಟರೆ ಪಡೆಯುವುದಕ್ಕೆ ಬರುತ್ತದೆ ಎಂದು ಹೇಳಿದ್ದೆ. ಈಗಲೂ ಆ ರೀತಿ ಮಾಡಬಹುದು. ಆದರೆ ಭೂಹೀನರ ಹೆಸರಿನಲ್ಲಿ ಭೂಮಿ ಇದ್ದವರು ಮುಂದೆ ಬರುವುದು ಗಮನಕ್ಕೆ ಬಂದಿದೆ. ಅಂಥವರನ್ನು ಹೊರಗೆ ಹಾಕಬೇಕಾಗುತ್ತದೆ.

ಶ್ರೀ ಎಂ ಎಚ್. ಜಯಪ್ರಕಾಶ ನಾರಾಯಣ್ :—ಭೂ ಹೀನರು ಸಾಗು ಮಾಡುತ್ತಿದ್ದ ಒಂದೆರಡು ಎಕರೆಗಳನ್ನು ಬಿಡಿಸಿ ಅಲ್ಲಿ ವನ ನಿರ್ಮಿಸಿದ್ದೀರಿ. ಆದರೆ ಹಾಗೆ ಮಾಡಿದರೆ ಅಲ್ಲಿ ಯಾವ ವಿಧವಾದ ಗಿಡವೂ ಬೆಳೆಯುವುದಿಲ್ಲವೆಂಬುದು ನಿಜವಲ್ಲವೇ ?

ಶ್ರೀ ಕೆ ಎಚ್ ಪಾಟೀಲ್ :—ಅಲ್ಲಿ ಗಿಡ ಹುಟ್ಟುವುದಕ್ಕೆ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಗಿಡ ಹುಟ್ಟದಿರುವ ಭೂಮಿಯೇ ಇಲ್ಲ ಸಣ್ಣ ಸಣ್ಣ ಕಲ್ಲಿನಮೇಲೆ ಕೂಡ ಬೆಳೆಸಬಹುದು, ಸಾಗುವಳಿಗ ಉತ್ತಮವಾಗಿಲ್ಲವಿರುವ ಕಡೆಯೂ ಗಿಡ ಬೆಳೆಸಬಹುದು.

ಕೆಲವರು ಭೂಮಿ ಇದ್ದವರ ಹರಿಜನರ ಹೆಸರಿನಲ್ಲಿ ಅನುಕೂಲ ಪಡೆಯುತ್ತಿರುವರು, ಅವರ ಬಗ್ಗೆ ಸಹಾನುಭೂತಿಯಿಲ್ಲ. ಸರಕಾರ ೨೦ ವರ್ಷದಿಂದ ಅನೂಕ್ರತವಾಗಿ ಸಾಗು ಮಾಡುವವರನ್ನು ಹೊರಗೆ ಹಾಕಬೇಕಾಗುತ್ತದೆ.

ಶ್ರೀ ಎಚ್ ಜಿ. ಚನ್ನಪ್ಪ :—ಭೂಮಿ ಪಡೆಯಲು ಅರ್ಜಿ ಕೊಡಬೇಕೆಂದರೆ ಅಲ್ಲಿ ಬೇರೆ ಕಡೆ ಭೂಮಿ ಇಲ್ಲ. ಅವರೇನು ಮಾಡಬೇಕು ?

ಶ್ರೀ ಕೆ. ಎಚ್ ಪಾಟೀಲ್ :—ಭೂಸುಧಾರಣೆ ಜಾರಿಗೆ ಬಂದಾಗ ಎಲ್ಲಿ ಭೂಮಿ ಇದೆ ಅಲ್ಲಿ ಕೊಡ ಬಹುದು. ಎಲ್ಲೂ ಸಿಕ್ಕದಿದ್ದರೆ ಇರುವ ಕಡೆ ಕೊಡೋಣ.

SRI DODDA THIMMAIAH.—May I know whether the Forest Dapartment has made any survey of the land under that Department whether the land which is unfit for afforstation will be given to the Revenue Department for distribution among the landless people ?

SRI K. H. PATIL.—The recent scientific opinion is that there is not a single inch of land which is not useful for afforestation. I am trying my best whether I can have afforestation on stones.

1-30 P.M.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.— ಎಲ್ಲ ಅರಣ್ಯಾಧಿಕಾರಿಗಳು ಈ ಜಮೀನು ಅರಣ್ಯದ ಅಭಿವೃದ್ಧಿಯನ್ನು ಮಾಡುವುದಕ್ಕೆ ಯೋಗ್ಯವಾಗಿಲ್ಲ ಎನ್ನುವಂಥ ವರದಿಯನ್ನು ಮಾಡಿದ್ದರೆ ಆ ಜಮೀನನ್ನು ಹರಿಜನ ಕಾಟುಂಬದವರಿಗೆ ಮಂಜೂರು ಮಾಡುವುದಕ್ಕೆ ಬಿಡುಗಡೆ ಮಾಡುತ್ತಾರೆಯೇ ?

ಶ್ರೀ ಕೆ. ಎಚ್. ಪಾಟೀಲ್.— ಹಾಗೆ ವರದಿಯನ್ನು ಆ ಅಧಿಕಾರಿ ಮಾಡಿಡ್ದರೆ ಆ ಖಾತೆಯಲ್ಲಿ ಮುಂದುವರಿಯುವುದಕ್ಕೆ ಅನರ್ಹರು ಎನ್ನುವ ಸರ್ಟಿಫಿಕೇಟನ್ನು ನಾನು ಕೊಡುತ್ತೇನೆ.

ಶ್ರೀ ಎಂ. ಬಿ. ರಾಮಸ್ವಾಮಿ.— ೨೦ ವರ್ಷವಾಗಲೀ, ೫೦ ವರ್ಷವಾಗಲೀ ಅವರು ಜಮೀನನ್ನು ಮಾಡಿಕೊಂಡು ಬಂದ ಮಾತ್ರಕ್ಕೆ ಅವರಿಗೆ ಕೊಡುವುದಕ್ಕಾಗುವುದಿಲ್ಲವೆಂದು ಮಾನ್ಯ ಮಂತ್ರಿಗಳು ಹೇಳಿದರು. ಆದರೆ ಇಂಥ ಜಾಗಗಳನ್ನು ಉತ್ತು ವ್ಯವಸಾಯಕ್ಕೆ ಯೋಗ್ಯವಾಗಿ ಯಾರಾದರೂ ಬಡವರು ಮಾಡಿ ಕೊಂಡಿದ್ದರೆ ಅದನ್ನು ಅವರಿಗೇ ಕೊಡಬೇಕೆಂದು ರೂಲಿಂಗ್‌ನಲ್ಲಿ ಸರ್ಕಾರದ ಆಜ್ಞೆಯಾಗಿದೆ. ಮಾನ್ಯ ಮಂತ್ರಿ ಗಳು ಹೇಳುವುದು ಸರ್ಕಾರಿ ಆಜ್ಞೆಗೆ ತದ್ವಿರುದ್ಧವಲ್ಲವೇ ?

ಶ್ರೀ ಕೆ. ಎಚ್. ಪಾಟೀಲ್.— ಸರ್ಕಾರದ ಆಜ್ಞೆ ಇದೆ, ನಾನು ಹೇಳಿರುವುದೂ ಇದೆ. ಮಾನ್ಯ ಸದಸ್ಯರಿಗೆ ಸರಿ ಬಂದಂತೆ ಅಭಿಪ್ರಾಯವನ್ನು ಮಾಡಿಕೊಳ್ಳಬಹುದು.